ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ದಿನಾಂಕ: 27.11.2015

ಸಂಖ್ಯೆ: ಸಿ8(7)ಶಾಶಿಅ.ಮನ್ಯತೆ ನವೀಕರಣ: 01/2015–16

–: ಸುತ್ತೋಲೆ :–

ವಿಷಯ: ರಾಜ್ಯದ ಅಧಿಕೃತ ಖಾಸಗಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಪ್ರತಿ
ತರಗತಿಗಳಲ್ಲಿ ಕನಿಷ್ಟ 25ಕ್ಕಿಂತ ಕಡಿಮೆ ಇರುವ ಶಾಲೆಗಳ ಮಾನ್ಯತೆ ನವೀಕರಣದ ಬಗ್ಗೆ.

ಉಲ್ಲೇಖ: ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ಮಾನ್ಯತೆ ನಿಯಮಗಳು 1999] ನಿಯಮ 99[4] [ಕೆ].

2] ಈ ಕಛೇರಿ ಸುತೋಲೆ ಸಂಖ್ಯೆ ಸಿ8(8)ದಾ.ಹಾ.ಕೊ.ಮನ್ನಾ:175/2007–08, ದಿನಾಂಕ: 19.12.2007.

04 DEC 2015

3] ಅನುದಾನ ಸಂಹಿತೆ 16[11]

4] ಸರ್ಕಾರದ ಆದೇಶ ಸಂಖ್ಯೆ: ಇಡಿ 324 ಎಸ್.ಎಲ್.ಬಿ 2015, ದಿನಾಂಕ: 29.10.2015.

********

1] ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ಮಾನ್ಯತೆ ನಿಯಮಗಳು 1999] ನಿಯಮ 99[4] [ಕೆ] ರಂತೆ ವಿದ್ಯಾರ್ಥಿಗಳ ಕನಿಷ್ಟ ಹಾಜರಾತಿಯನ್ನು ರಾಜ್ಯದ ಅಧಿಕೃತ ಖಾಸಗಿ ಪ್ರೌಢಶಾಲೆಗಳಲ್ಲಿ ಕಾಯ್ದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಬೆಂಗಳೂರು, ದಿನಾಂಕ: 04.11.1999 ರಂತೆ

ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 31 ವಿವಿಧ 98 ಬೆಂಗಳೂರು, ದಿನಾಂಕ: 04.11.1999 ರಂತೆ ಉಲ್ಲೇಖ(2)ರಲ್ಲಿ ಕನಿಷ್ಟ ಹಾಜರಾತಿ ಕಾಯ್ದುಕೊಳ್ಳದ ಶಾಲೆಗಳ ಬಗ್ಗೆ ಜರುಗಿಸಬೇಕಾದ ಕ್ರಮದ ಬಗ್ಗೆ ಸ್ಪಷ್ಟವಾಗಿ ತಿಳಿಸಿ ಅನಗತ್ಯವಾಗಿ ಹಾಜರಾತಿ ಕೊರತೆ ಮನ್ನಾ ಮತ್ತು ಮಾರ್ಗದರ್ಶನ ಕೋರಿ ಪತ್ರ ಬರೆಯದಿರುವಂತೆ ತಿಳಿಯಪಡಿಸಲಾಗಿದೆ. ಆದಾಗ್ಯೂ ಈ ಕಛೇರಿಗೆ ಹಲವಾರು ವರ್ಷಗಳ ಹಾಜರಾತಿ ಕೊರತೆ ಮನ್ನಾ ಮತ್ತು ಮಾನ್ಯತೆ ನವೀಕರಣ ಸಂಬಂಧ ಮಾರ್ಗದರ್ಶನ ಹಾಗೂ ಸ್ಪಷ್ಟೀಕರಣ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ ಇನ್ನು ಮುಂದೆ ಅನಗತ್ಯವಾಗಿ ಪತ್ರ ವ್ಯವಹಾರ ಮಾಡಬಾರದೆಂದು ಸೂಚಿಸುತ್ತಾ ಈ ಕೆಳಕಂಡ ಅಂಶಗಳಂತೆ ಕ್ರಮವಹಿಸಲು ಸೂಚಿಸಿದೆ.

1] ಅನುದಾನ ಸಂಹಿತೆ 16[11]ರಲ್ಲಿ ವಿದ್ಯಾರ್ಥಿಗಳ ಹಾಜರಾತಿ ಕೊರತೆ ಮನ್ನಾ ಮಾಡಲು **"ವಿಶೇಷ ಸಂದರ್ಭದಲ್ಲಿ "** ಮಾತ್ರ ಹಾಜರಾತಿ ಕೊರತೆ ಮನ್ನಾಗೆ ಅವಕಾಶ ಕಲ್ಪಿಸಲಾಗಿದೆ. ಇಂತಹ ವಿಶೇಷ ಸಂದರ್ಭಗಳಲ್ಲಿ ಪ್ರಸ್ತುತ ಎರಡು ವರ್ಷಗಳಿಗೆ ಅನ್ವಯವಾಗುವಂತೆ ವಿದ್ಯಾರ್ಥಿಗಳ ಹಾಜರಾತಿ ಕೊರತೆ ಮನ್ನಾ ಮಾಡಲಾಗುತ್ತಿದೆ. ಆದ್ದರಿಂದ **ವಿಶೇಷ ಸಂದರ್ಭದ** ಕಾರಣಗಳನ್ನು **ತಿಳಿಸಿ ಪ್ರಸ್ತಾವನೆಯನ್ನು ಇಲ್ಲಿಯವರೆಗೂ ವಿದ್ಯಾರ್ಥಿಗಳ ಹಾಜರಾತಿ ಕೊರತೆ ಮನ್ನಾ ಮಾಡಿರುವುದಿಲ್ಲ**ವೆಂದು, **ಇದೇ ಪ್ರಥಮ ಬಾರಿಗೆ ವಿದ್ಯಾರ್ಥಿಗಳ ಹಾಜರಾತಿ ಕೊರತೆಗೆ ಶಿಫಾರಸ್ಸು ಮಾಡಲಾಗುತ್ತಿದೆ**ಯೆಂದು **ನಮೂದಿಸಿ ಸಲ್ಲಿಸುವುದು.**

2] ಉಲ್ಲೇಖ(4)ರ ಸರ್ಕಾರದ ಆದೇಶದಲ್ಲಿ ಮಾನ್ಯತೆ ಪಡೆದ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಕನಿಷ್ಟಕ್ಕಿಂತ ಕಡಿಮೆ ಇದ್ದರೂ ಸಹ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಇಂತಹ ಶಾಲೆಗಳಿಗೆ ಪ್ರಸ್ತುತ 2015–16ನೇ ಸಾಲಿಗೆ ಶಾಲಾ ಸಂಖೇತ ನೀಡಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ನೀಡಿದೆ. ವಿದ್ಯಾರ್ಥಿಗಳ ಹಾಜರಾತಿ 25ಕ್ಕಿಂತ ಕಡಿಮೆ ಇರುವ ಹಾಗೂ ಹಾಜರಾತಿ ಕೊರತೆ ಮುನ್ನ ಪಡೆಯದ ಶಾಲೆಗಳನ್ನು ಶಿಕ್ಷಣ ಕಾಯ್ದೆ ನಿಯಮ–39ರನ್ವಯ ಶಾಲೆಯ ನೋಂದಣಿ ರದ್ದುಪಡಿಸುವ ಮುನ್ನ ಒಂದು ಬಾರಿಯ ವಿಚಾರಣೆಗೆ ಅವಕಾಶ **[Opportunity of hearing]** ನೀಡಬೇಕಾಗಿರುವುದರಿಂದ ಅಂತಹ ಶಾಲೆಗಳಿಗೆ ನಿಮ್ಮ ಹಂತದಿಂದ ಶಾಲೆ ಮುಚ್ಚಿಸುವ ಬಗ್ಗೆ " Notice " ಜಾರಿಗೊಳಿಸಿ ಅಂತಿಮವಾಗಿ ಪಟ್ಟಿಯನ್ನು 30.01.2016ರೊಳಗೆ ಈ ಕಛೇರಿಗೆ **" ಈ ಮೇಲ್ "** ಮುಖಾಂತರ soft & hard ಪ್ರತಿಯನ್ನು ಸಲ್ಲಿಸಲು ತಿಳಿಸಿದೆ.

3] ಈ ಕಛೇರಿಯಿಂದ ಒಂದು ಬಾರಿಯ ಕ್ರಮವಾಗಿ ಹಾಜರಾತಿ ಕೊರತೆ ಮನ್ನಾ ಪಡೆದ ತರಗತಿ ಮತ್ತು ಈ ಸದರಿ ತರಗತಿಯ ಸಾಲಿನ ವಿದ್ಯಾರ್ಥಿಗಳು ಆ ಶಾಲೆಯ 10ನೇ ತರಗತಿ ಮುಗಿಯುವವರೆಗೆ ಅಧಿಕೃತ ಮತ್ತು ಹಾಜರಾತಿ ಕೊರತೆ ಮನ್ನಾ ಪಡೆದ ವಿದ್ಯಾರ್ಥಿಗಳೆಂದೇ ಪರಿಗಣಿಸತಕ್ಕದ್ದು. [ಉದಾಹರಣೆ:– 2015–16ನೇ ಸಾಲಿನ 09ನೇ ತರಗತಿ ವಿದ್ಯಾರ್ಥಿಗಳ ಹಾಜರಾತಿ ಕೊರತೆ ಮನ್ನಾ ಮಾಡಿದ್ದಲ್ಲಿ, 2016–17ನೇ ಸಾಲಿನಲ್ಲಿ ಸದರಿ ತರಗತಿಯ ವಿದ್ಯಾರ್ಥಿಗಳ ಹಾಜರಾತಿ ಕೊರತೆ ಮನ್ನಾ ಆಗಿರುತ್ತದೆ ಎನ್ನುವುದನ್ನು ಮಾನ್ಯತೆ ನವೀಕರಣಕ್ಕೆ ಪರಿಗಣಿಸುವುದು.

ಮುಂದುವರೆದು 2016–17ನೇ ಶೈಕ್ಷಣಿಕ ವರ್ಷದಿಂದ ಕನಿಷ್ಟ 25 ವಿಧ್ಯಾರ್ಥಿಗಳ ಸಂಖ್ಯಾಬಲ ಉಳಿಸಿಕೊಳ್ಳುವ ವಿಶ್ವಾಸಯೋಗ್ಯ ಭರವಸೆ ನೀಡಲಾಗದ ಶಾಲೆಗಳಲ್ಲಿನ 09ನೇ ತರಗತಿ ಮಾನ್ಯತೆ ರದ್ದುಪಡಿಸುವ ಅಂತಹ ಶಾಲೆಗಳಿಗೆ 09ನೇ ತರಗತಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳದಂತೆಯೂ ಸಹ ಕ್ರಮವಹಿಸಲು ಸೂಚಿಸಿದೆ. ಹಾಜರಾತಿ ಕೊರತೆ ಮನ್ನಾ ಮಾಡಿದ ನಂತರದ ವರ್ಷಗಳಲ್ಲಿ ನಿಗದಿತ ಹಾಜರಾತಿಕಾಯ್ದುಕೊಳ್ಳಲು ವಿಫಲವಾಗುವ ಶಾಲೆಗಳನ್ನು ಹಾಜರಾತಿ ಕೊರತೆ ಮನ್ನಾ ಆದೇಶದ ಷರತ್ತುಗಳು ಮತ್ತು ನಿಯಮಗಳಂತೆ ಶಾಲೆ ಮುಚ್ಚಿಸಲು ಕ್ರಮವಹಿಸುವುದು.

Kulaseeah

ನಿರ್ದೇಶಕರು (ಪ್ರೌಢಶಿಕ್ಷಣ)

ಪ್ರತಿಯನ್ನು:–

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ.
2. ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
3. ಸಂಬಂಧಪಟ್ಟ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮಾಹಿತಿಗಾಗಿ.
5. ಕಛೇರಿ ಪ್ರತಿ.

[ಅಟೆಂಡೆನ್ಸ್ ಕಂಡೋನ್]

01

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,ನೃಪತುಂಗ ರಸ್ತೆ,ಬೆಂಗಳೂರು-1**

ಸಂಖ್ಯೆ:ಸಿ8[7][illegible] ಮಾನ್ಯತೆ ನವೀಕರಣ/01/2015-16 ದಿನಾಂಕ: 07.12.2015

**ಸುತ್ತೋಲೆ**

ವಿಷಯ:-ರಾಜ್ಯದಲ್ಲಿನ ಖಾಸಗಿ ಅನುದಾನಿತ/ಅನುದಾನರಹಿತ ಮಾನ್ಯತೆ ನವೀಕರಣವಾಗದೇ ಇರುವ ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 2016-17ನೇ ಸಾಲಿನ SSLC ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 113 ವಿವಿಧ 2005, ದಿ: 02.11.2006.

2) ಈ ಕಚೇರಿಯ ಸುತ್ತೋಲೆ ಸಂಖ್ಯೆ:ಸಿ8 ಶಾಶಿಅ/ಅಧಿಕ ವಿಭಾಗ/2001-02, ದಿ: 17.08.2002.

3) ಈ ಕಚೇರಿಯ ಸುತ್ತೋಲೆ ಸಂಖ್ಯೆ:ಸಿ8(7).ಶಾಶಿಅ.ಮಾನ್ಯತೆ ನವೀಕರಣ/01/2015-16, ದಿನಾಂಕ: 27.11.2015.

4) ಕರ್ನಾಟಕ ಶಿಕ್ಷಣ ಕಾಯ್ದೆ-1983ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು(ಪ್ರಾಥಮಿಕ & ಪ್ರೌಢಶಿಕ್ಷಣ ಸಂಸ್ಥೆಗಳ) ಮಾನ್ಯತೆ ನಿಯಮಗಳು-1999,ನಿಯಮ-99(4)(ಕೆ).

5) ಅನುದಾನ ಸಂಹಿತೆ ನಿಯಮ-16(11).

6) ಈ ಕಚೇರಿಯ ಸುತ್ತೋಲೆ ಸಮ ಸಂಖ್ಯೆ ದಿನಾಂಕ: 21.10.2015.

7) ಸರ್ಕಾರದ ಆದೇಶ ಸಂಖ್ಯೆ: ಇಡಿ 324 ಎಸ್‌ಎಲ್‌ಬಿ 2015, ದಿ: 29.10.2015.

8) ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಇವರ ಸೂಚನೆ ದಿನಾಂಕ: 04.12.2015.

ಉಡುಪಿ ಜಿಲ್ಲಾ ಉಪನಿರ್ದೇಶಕರ ಕಛೇರಿ ಉಡುಪಿ
15 DEC 2015

&&&&&&

ಖಾಸಗಿ ಅನುದಾನಿತ/ಅನುದಾನ ರಹಿತ ಒಟ್ಟು 3187 ಪ್ರೌಢಶಾಲೆಗಳು ಮಾನ್ಯತೆ ನವೀಕರಣವಾಗದೇ ಇರುವುದು ಅಕ್ಟೋಬರ್-2015ರ ಅಂತ್ಯಕ್ಕೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಿಂದ ವರದಿಯಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆ-1983ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ/ಪ್ರೌಢಶಿಕ್ಷಣ) ಮಾನ್ಯತೆ ನಿಯಮಗಳು-1999, ನಿಯಮ-99(4)(ಕೆ)ರಂತೆ ವಿದ್ಯಾರ್ಥಿಗಳ ಕನಿಷ್ಠ 25 ಹಾಜರಾತಿಯನ್ನು ಕಾಯ್ದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಹಾಜರಾತಿ ಕೊರತೆ ಇರುವ ಶಾಲೆಗಳಿಗೆ ಅನುದಾನ ಸಂಹಿತೆ-16(11)ರಲ್ಲಿ ವಿದ್ಯಾರ್ಥಿಗಳ ಹಾಜರಾತಿ ಕೊರತೆ ಮನ್ನಾ ಮಾಡಲು ವಿಶೇಷ ಸಂಧರ್ಭದಲ್ಲಿ ಎರಡು ವರ್ಷಗಳಿಗೆ ಅನ್ವಯವಾಗುವಂತೆ ಅವಕಾಶ ಕಲ್ಪಿಸಲಾಗಿದೆ.

ಅದಾಗ್ಯೂ ಕೆಲವು ಅನುದಾನಿತ/ಅನುದಾನ ರಹಿತ ಮಾನ್ಯತೆ ನವೀಕರಣ ಪಡೆಯದೆ ಇರುವ ಪ್ರೌಢಶಾಲೆಗಳ ಮಾನ್ಯತೆ ನವೀಕರಣದ ಬಗ್ಗೆ ಸರ್ಕಾರದಿಂದ ಅನುಮೋದಿತವಾದಂತೆ ಉಲ್ಲೇಖ-4ರ ಈ ಕಚೇರಿಯ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಉಪನಿರ್ದೇಶಕರಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿತ್ತು. ಆದರೆ ದಿನಾಂಕ: 01.12.2015ರ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ವರದಿಯಂತೆ ರಾಜ್ಯದಲ್ಲಿನ ಕೆಲವು ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳು 2015-16ನೇ ಸಾಲಿಗೆ ಮಾನ್ಯತೆ ನವೀಕರಣ ಆಗಿರುವುದಿಲ್ಲ. ಇಂತಹ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು SSLC ಪರೀಕ್ಷೆಗೆ ಹಾಜರಾಗಲು ಈಗಾಗಲೇ ಆಡಳಿತ ಮಂಡಳಿಯವರು ಅನ್‌ಲೈನ್ ಮೂಲಕ ಪರೀಕ್ಷಾ ಮಂಡಳಿಗೆ ಶುಲ್ಕ ಪಾವತಿ ಮಾಡಿರುತ್ತಾರೆ.

ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮ 36ರಂತೆ ಮತ್ತು ಉಲ್ಲೇಖ-2ರ ಸುತ್ತೋಲೆಯಂತೆ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳ ಮಾನ್ಯತೆ ನವೀಕರಣ ಪ್ರಾಧಿಕಾರ ಜಿಲ್ಲಾ ಉಪನಿರ್ದೇಶಕರೆ ಆಗಿರುತ್ತಾರೆ. ಮಾನ್ಯತೆ ನವೀಕರಣ ಮಾಡುವ ಕುರಿತು ಉಲ್ಲೇಖ-1 ಮತ್ತು 2ರಲ್ಲಿ ವಿವರವಾದ ಸುತ್ತೋಲೆಯನ್ನು ಈಗಾಗಲೆ ಕಳುಹಿಸಲಾಗಿದೆ. ಈ ಶಿಕ್ಷಣ ಕಾಯ್ದೆಯ/ಸುತ್ತೋಲೆಯಲ್ಲಿನ ಮಾರ್ಗ ಸೂಚಿಯಂತೆ ಜಿಲ್ಲಾ ಉಪನಿರ್ದೇಶಕರು ಮಾನ್ಯತೆ ನವೀಕರಣ ಕುರಿತು ಸಕಾಲದಲ್ಲಿ ಕ್ರಮವಹಿಸದೆ ಇರುವುದರಿಂದ ಸಮಸ್ಯೆಗಳು ಉದ್ಭವವಾಗಿರುತ್ತವೆ. ಆದ್ದರಿಂದ ಈ ಸಂಬಂಧ ಮಾನ್ಯತೆ ನವೀಕರಣಕ್ಕೆ ಬಾಕಿ ಇರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಈ ಕೆಳಕಂಡ ಮಾರ್ಗಸೂಚಿಯಂತೆ ಮಾನ್ಯತೆ ನವೀಕರಣ ಮಾಡುವ ಬಗ್ಗೆ ಕ್ರಮವಹಿಸಲು ಸೂಚಿಸಲಾಗಿದೆ.

| ಕ್ರಮ ಸಂಖ್ಯೆ | ಮಾನ್ಯತೆ ನವೀಕರಣ ಆಗದೇ ಇರುವುದಕ್ಕೆ ಕಾರಣ | ಪ್ರಸ್ತುತ ಉಪನಿರ್ದೇಶಕರ ಹಂತದಿಂದ ವಹಿಸಬೇಕಾದ ಕ್ರಮ. |
|---|---|---|
| 1. | ಆಡಳಿತ ಮಂಡಳಿಯ ವಿವಾದ ನ್ಯಾಯಾಲಯದಲ್ಲಿರುವುದರಿಂದ. ಆಡಳಿತ ಮಂಡಳಿಯಲ್ಲಿ | ಇಂತಹ ಪ್ರಕರಣಗಳಿರುವ ಆಡಳಿತ ಮಂಡಳಿಯ ಅಧೀನದಲ್ಲಿನ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳು ಈಗಾಗಲೆ ಸರ್ಕಾರ/ಇಲಾಖೆಯಿಂದ ಹೊಸ |

| | | |
|---|---|---|
| | ಆಡಳಿತಾಧಿಕಾರಿ, ವಿಶೇಷಾಧಿಕಾರಿ, ಮತ್ತು ವೇತನ ಬಟವಾಡೆ ಅಧಿಕಾರಿಗಳ ನೇಮಕಾತಿ ಆಗಿರುವುದರಿಂದ. | ಪ್ರೌಢಶಾಲೆಗೆ ಅನುಮತಿ ಪಡೆದು ನಡೆಸಲಾಗುತ್ತಿದ್ದು, ಹಾಗೂ ಸದರಿ ಶಾಲೆಗಳಿಗೆ ನೋಂದಣಿ/ಮಾನ್ಯತೆ ಪಡೆಯಲಾಗಿರುವ ಅಂಶವನ್ನು ಪರಿಗಣಿಸಿ, ಇಂತಹ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳು SSLC ಪರೀಕ್ಷೆಯಿಂದ ವಂಚಿತರಾಗಬಾರದೆಂಬ ದೃಷ್ಠಿಯಿಂದ ಆಡಳಿತಾಧಿಕಾರಿ, ವಿಶೇಷಾಧಿಕಾರಿ, ಮತ್ತು ವೇತನ ಬಟವಾಡೆ ಅಧಿಕಾರಿಗಳ ಮೂಲಕ ಪ್ರಸ್ತಾವನೆ ಪಡೆದು ಆಡಳಿತ ಮಂಡಳಿ ವಿವಾದಗಳಿದ್ದಲ್ಲಿ ಶೀಘ್ರವಾಗಿ ಇತ್ಯರ್ಥ ಪಡಿಸಿಕೊಳ್ಳುವ ಷರತ್ತು ವಿಧಿಸಿ 2015-16 & 2016-17ನೇ ಸಾಲಿಗೆ ಮಾನ್ಯತೆ ನವೀಕರಣಕ್ಕೆ ಮಂಜೂರಾತಿ ನೀಡುವುದು. |
| 2. | ಸರ್ಕಾರದಿಂದ ಅನುಮತಿ ಇಲ್ಲದೇ ಸ್ಥಳಾಂತರ/ಹಸ್ತಾಂತರ ಮಾಡಿಕೊಂಡಂತಹ ಕಾರಣಗಳಿಂದ. | ಇಂತಹ ಪ್ರಕರಣಗಳಿರುವ ಆಡಳಿತ ಮಂಡಳಿಯ ಅಧೀನದಲ್ಲಿರುವ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳಿಗೆ ವಿದ್ಯಾರ್ಥಿಗಳು SSLC ಪರೀಕ್ಷೆಯಿಂದ ವಂಚಿತರಾಗಬಾರದೆಂಬ ದೃಷ್ಠಿಯಿಂದ 2015-16ನೇ ಸಾಲಿಗೆ ಮಾತ್ರ ಅನ್ವಯಿಸುವಂತೆ ಈ ಕೆಳಕಂಡ ಷರತ್ತು ವಿಧಿಸಿ ಮಾನ್ಯತೆ ನವೀಕರಣ ಮಾಡುವುದು. ಇದಲ್ಲದೆ ಈ ಸಂಬಂಧ ಆಡಳಿತ ಮಂಡಳಿಯವರಿಂದ ಈ ಕೆಳಗೆ ಸೂಚಿಸಿರುವಂತೆ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಸಹ ಪಡೆಯುವುದು. ಇದನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಡ್ಡಾಯವಾಗಿ ದೃಢೀಕರಿಸತಕ್ಕದ್ದು.<br>**ಮುಚ್ಚಳಿಕೆ:-**<br>❖ ಈ ವಿಚಾರಕ್ಕೆ ಸಂಬಂಧಪಟ್ಟಂತೆ ದಿನಾಂಕ: 01.06.2016ರೊಳಗೆ ಹಸ್ತಾಂತರ/ಸ್ಥಳಾಂತರಕ್ಕೆ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯುತ್ತೇವೆ, ಒಂದು ವೇಳೆ ಅನುಮತಿ ಪಡೆಯದೆ ಇದ್ದಲ್ಲಿ 2016-17ನೇ ಸಾಲಿಗೆ 9ನೇ ತರಗತಿಗೆ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವುದಿಲ್ಲ ಎಂಬುದಾಗಿ ತಿಳಿಸುತ್ತಾ ಇಲಾಖೆಯು ಕೈಗೊಳ್ಳುವ ಕ್ರಮಕ್ಕೆ ಬದ್ಧರಾಗಿರುತ್ತೇವೆಂದು ಸಂಬಂಧಪಟ್ಟ ಆಡಳಿತ ಮಂಡಳಿಯವರಿಂದ ಮುಚ್ಚಳಿಕೆ ಪಡೆಯುವುದು.<br>**ಷರತ್ತು:-**<br>❖ ಶಾಲಾ ಆಡಳಿತ ಮಂಡಳಿಯವರು ದಿ: 01.06.2016ರೊಳಗೆ ಸ್ಥಳಾಂತರ/ಹಸ್ತಾಂತರಕ್ಕೆ ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.<br>❖ ಒಂದು ವೇಳೆ ಅನುಮತಿ ಪಡೆಯದೆ ಇದ್ದಲ್ಲಿ 2016-17ನೇ ಸಾಲಿನಗೆ 9ನೇ ತರಗತಿಗೆ ಯಾವುದೇ ಕಾರಣಕ್ಕೂ ದಾಖಲಾತಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಈ ಸಂಬಂಧ ದಾಖಲಾತಿ ಮಾಡಿಕೊಳ್ಳದಂತೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು ನಿಗಾ ವಹಿಸಿ ಖಚಿತ ಪಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. |
| 3. | ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ವಿವಿಧ ಕಾರಣಗಳಿಂದ 25ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳಿಗೆ ಮಾನ್ಯತೆ ನವೀಕರಣ ಕುರಿತು. | 1) 25ಕ್ಕಿಂತ ಕಡಿಮೆ ದಾಖಲಾತಿ/ಹಾಜರಾತಿ ಇರುವ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳಿಗೆ ಈ ಕೆಳಕಂಡ ಷರತ್ತು ವಿಧಿಸಿ 2015-16ನೇ ಸಾಲಿಗೆ ಮಾತ್ರ ಅನ್ವಯಿಸುವಂತೆ ಮಾನ್ಯತೆ ನವೀಕರಣ ನೀಡುವುದು. |

| | | |
|---|---|---|
| | | **ಮುಚ್ಚಳಿಕೆ:-**<br>❖ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳು 2016-17ನೇ ಸಾಲಿನಲ್ಲಿ ಶಿಕ್ಷಣ ಕಾಯ್ದೆ ನಿಯಮದಡಿಯಲ್ಲಿ ನಿಗದಿಪಡಿಸಿದ ಕನಿಷ್ಠ ಹಾಜರಾತಿಯನ್ನು ಕಾಯ್ದುಕೊಳ್ಳಲಾಗುವುದು. ಒಂದು ವೇಳೆ ಕಾಯ್ದುಕೊಳ್ಳಲು ವಿಫಲರಾದಲ್ಲಿ ಇಲಾಖೆಯು ಕೈಗೊಳ್ಳುವ ಕ್ರಮಕ್ಕೆ ಬದ್ಧರಾಗಿರುತ್ತೇವೆಂದು ಸಂಬಂಧಪಟ್ಟ ಆಡಳಿತ ಮಂಡಳಿಯವರಿಂದ ಮುಚ್ಚಳಿಕೆ ಪ್ರಮಾಣ ಪತ್ರ ಪಡೆಯುವುದು.<br>**ಷರತ್ತು:-**<br>❖ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳು 2016-17ನೇ ಸಾಲಿನಲ್ಲಿ ಶಿಕ್ಷಣ ಕಾಯ್ದೆ ನಿಯಮದಡಿಯಲ್ಲಿ ನಿಗದಿಪಡಿಸಿದ ಕನಿಷ್ಠ ಹಾಜರಾ ಹಾಜರಾತಿಯನ್ನು ಕಾಯ್ದುಕೊಳ್ಳುವುದು ಕಡ್ಡಾಯವಾಗಿರುತ್ತದೆ.<br>2) 10ನೇ ತರಗತಿಯಲ್ಲಿ 25ಕ್ಕಿಂತ ಕಡಿಮೆ ಇರುವ ಎಲ್ಲಾ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳ ಬಗ್ಗೆ ಸರ್ಕಾರದ ಹಂತದಲ್ಲಿ 2016-17ನೇ ಸಾಲಿಗೆ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಮತ್ತು ದಿನಾಂಕ: 15.12.2015ರೊಳಗೆ ಸರ್ಕಾರಕ್ಕೆ ಮಾಹಿತಿ ಸಲ್ಲಿಸಬೇಕಾಗಿರುವುದರಿಂದ 1 ರಿಂದ 10ನೇ ತರಗತಿವರೆಗಿನ ದಾಖಲಾತಿ/ಹಾಜರಾತಿ ವಿವರವನ್ನು ಹಾರ್ಡ್ ಮತ್ತು ಸಾಫ್ಟ್ ಕಾಪಿ ಮೂಲಕ ಈ ಕಚೇರಿಗೆ ದಿನಾಂಕ: 13.12.2015ರೊಳಗೆ ಸಲ್ಲಿಸುವುದು. |
| 4. | ಮಾನ್ಯತೆ ನವೀಕರಣಕ್ಕೆ ಪ್ರಸ್ತಾವನೆಯನ್ನೇ ಸಲ್ಲಿಸದೇ ಇರುವ ಶಾಲೆಗಳ ಪ್ರಕರಣಗಳು. | ಇಂತಹ ಪ್ರಕರಣಗಳು ಇರುವ ಖಾಸಗಿ ಅನುದಾನಿತ/ಅನುದಾನರಹಿತ ಪ್ರೌಢಶಾಲೆಗಳಿಗೆ ಅಂತಿಮವಾಗಿ ದಿನಾಂಕ: 15.12.2015ರೊಳಗೆ ಪ್ರಸ್ತಾವನೆ ಸಲ್ಲಿಸಿ ಮಾನ್ಯತೆ ನವೀಕರಣವನ್ನು ಸಕಾಲದಲ್ಲಿ ಪಡೆಯುವಂತೆ ಸಂಬಂಧಪಟ್ಟ ಆಡಳಿತ ಮಂಡಳಿಗಳಿಗೆ ಎಚ್ಚರಿಕೆ ನೀಡುವುದು.<br>ಒಂದು ವೇಳೆ ಇದಾದ ನಂತರವು ಮಾನ್ಯತೆ ನವೀಕರಣಕ್ಕೆ ಪ್ರಸ್ತಾವನೆ ಸಲ್ಲಿಸದೆ, ಮಾನ್ಯತೆ ನವೀಕರಣ ಪಡೆಯದೆ, ಇರುವ ಸಂದರ್ಭದಲ್ಲಿ ಅಂತಹ ಶಾಲೆಗಳ SSLC ವಿದ್ಯಾರ್ಥಿಗಳನ್ನು " ಖಾಸಗಿ " ವಿದ್ಯಾರ್ಥಿಗಳಾಗಿ ಪರೀಕ್ಷೆ ಬರೆಯಲು ಕ್ರಮ ವಹಿಸುವುದು. |
| 5. | ಈಗಾಗಲೆ ಒಂದು ಬಾರಿ ಹಾಜರಾತಿ ಮನ್ನಾ ಪಡೆದುಕೊಂಡಿದ್ದು, ನಂತರ ಎರಡನೇ ಬಾರಿ ಮನ್ನಾ ಕೋರಿ ಬಂದಿರುವ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳ ಮಾನ್ಯತೆ ನವೀಕರಣ ಕುರಿತು. | ಈಗಾಗಲೆ ಒಂದು ಬಾರಿಗೆ ದಾಖಲಾತಿ/ಹಾಜರಾತಿ ಮನ್ನಾ ಅನುಮತಿ ಪಡೆದು ಎರಡನೇ ಬಾರಿಗೆ ಮನ್ನಾ ಕೋರಿ ಬಂದಂತಹ ಖಾಸಗಿ ಅನುದಾನಿ/ಅನುದಾನ ರಹಿತ ಪ್ರೌಢಶಾಲೆಗಳಿಗೆ ವಿದ್ಯಾರ್ಥಿಗಳು SSLC ಪರೀಕ್ಷೆಯಿಂದ ವಂಚಿತರಾಗಬಾರದೆಂಬ ದೃಷ್ಟಿಯಿಂದ 2015-16ನೇ ಸಾಲಿಗೆ ಮಾತ್ರ ಮಾನ್ಯತೆ ನವೀಕರಿಸುವುದು.<br>ಈ ಸಂಬಂಧ ಶಿಕ್ಷಣ ಕಾಯ್ದೆ ನಿಯಮಗಳಲ್ಲಿ ನಿಗದಿಪಡಿಸಿರುವ ಕನಿಷ್ಠ ಹಾಜರಾತಿಯನ್ನು ಕಾಯ್ದು ಕೊಳ್ಳುವುದಾಗಿ, ಒಂದು ವೇಳೆ ಕಾಯ್ದು ಕೊಳ್ಳಲು ವಿಫಲರಾದಲ್ಲಿ ಇಲಾಖೆಯು ಕೈಗೊಳ್ಳುವ ಕ್ರಮಕ್ಕೆ ಬದ್ಧರಾಗಿರುತ್ತೇವೆಂದು ಸಂಬಂಧಪಟ್ಟ ಆಡಳಿತ ಮಂಡಳಿಯವರಿಂದ |

04.

| | | |
|---|---|---|
| | | ಈ ಅಂಶವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳವರ/ ಉಪನಿರ್ದೇಶಕರ ಹಂತದಲ್ಲಿ ಅನುಪಾಲಿಸಿ ಕನಿಷ್ಠ ಹಾಜರಾತಿಯನ್ನು ಕಾಯ್ದು ಕೊಳ್ಳುವಲ್ಲಿ ವಿಫಲವಾ ದಂತಹ ಶಾಲೆಗಳನ್ನು ಕರ್ನಾಟಕ ಶಿಕ್ಷಣ ಕಾಯ್ದೆ-1983 ನಿಯಮಗಳಡಿಯಲ್ಲಿ ಮುಚ್ಚಿಸಲು ಕ್ರಮ ವಹಿಸುವುದು. |
| 6. | ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳಿಗೆ ಮಾನ್ಯತೆ ನವೀಕರಣ ಕುರಿತು. | ಇಂತಹ ಪ್ರಕರಣಗಳ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳಿಗೆ ಈ ಕೆಳಕಂಡ ಷರತ್ತು ವಿಧಿಸಿ 2015-16ನೇ ಸಾಲಿಗೆ ಮಾನ್ಯತೆ ನವೀಕರಣವನ್ನು ಮಾಡುವುದು.<br>**ಮುಚ್ಚಳಿಕೆ:-**<br>❖ ದಿನಾಂಕ: 30.05.2016ರೊಳಗೆ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ಇದ್ದಲ್ಲಿ ಇಲಾಖೆಯು ವಿಧಿಸಿರುವ ಷರತ್ತಿಗೆ ಬದ್ಧರಾಗಿರುತ್ತೇವೆ ಎಂದು ಆಡಳಿತ ಮಂಡಳಿಯವರಿಂದ ಮುಚ್ಚಳಿಕೆ ಪಡೆಯುವುದು.<br>**ಷರತ್ತು:-**<br>❖ ಆಡಳಿತ ಮಂಡಳಿಯವರು ಮೂಲಭೂತ ಸೌಲಭ್ಯಗಳನ್ನು ದಿ: 30.05.2016ರೊಳಗೆ ಕಲ್ಪಿಸಲು/ ಉತ್ತಮಪಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.<br>ಈ ಅಂಶವನ್ನು ಉಪನಿರ್ದೇಶಕರ ಹಂತದಲ್ಲಿ ಅನುಪಾಲಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ವಿಫಲವಾದಂತಹ ಶಾಲೆಗಳನ್ನು ಶಿಕ್ಷಣ ಕಾಯ್ದೆ ನಿಯಮಗಳಡಿಯಲ್ಲಿ ಮುಚ್ಚಿಸಲು ಕ್ರಮವಹಿಸುವುದು. |

ಮೇಲೆ ವಿವರಿಸಿರುವ ಕ್ರಮಗಳನ್ನು ಕಟ್ಟುನಿಟ್ಟಾಗಿ ಕಡ್ಡಾಯವಾಗಿ ಪಾಲಿಸುವುದು. ಮುಂದುವರೆದು ಉಪನಿರ್ದೇಶಕರು ಸ್ವಯಂ ಪ್ರೇರಿತ ಗೊಂದಲಗಳನ್ನು ಸೃಷ್ಟಿಸಿಕೊಂಡು ಈ ಕಚೇರಿಯ ಮಾರ್ಗದರ್ಶನ/ ನಿರ್ದೇಶನ ಕೋರಿ ಪ್ರಸ್ತಾವನೆ ಸಲ್ಲಿಸುವುದನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಅಂತಿಮವಾಗಿ ದಿನಾಂಕ: 12.12.2015ರೊಳಗೆ ಈಗಾಗಲೆ ನವೆಂಬರ್ ಮಾಹೆಯಲ್ಲಿ 03 ಬಾರಿ ಮಾನ್ಯತೆ ನವೀಕರಣದ ಮಾಹಿತಿ ಈ ಕಚೇರಿಗೆ ಸಲ್ಲಿಸಿದಂತೆ ಅದೇ ನಮೂನೆಯಲ್ಲಿ ಹಾರ್ಡ್ ಮತ್ತು ಸಾಫ್ಟ್ ಕಾಪಿ ಮೂಲಕ ಸಲ್ಲಿಸುವುದು.

**( ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

(ಫಿಲೋಮಿನ ಲೋಬೊ)
ನಿರ್ದೇಶಕರು(ಪ್ರೌಢಶಿಕ್ಷಣ)

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ನಿರ್ದೇಶಕರು [ಪರೀಕ್ಷೆಗಳು], ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮಾಹಿತಿಗಾಗಿ
3. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರಿಗೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಪ್ರತಿ \\typing3server\e\e\est2\babu\narayansmamy.t.s..docx